**ಇ-ಆಡಳಿತ ಇಲಾಖೆಯ ಇಡಿಸಿಎಸ್ ನಿರ್ದೇಶನಾಲಯದ 4(1) (ಬಿ) ವಿವಿರಗಳು**

**1.ಸದರಿ ಅಧಿನಿಯಮದ ಕಲಂ 4(1) (ಬಿ) ರ ಪಾಲನೆಗೆ ಸಂಬಂಧಿಸಿದಂತೆ ಮಾಹಿತಿ : -**

1.1 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ-ಆಡಳಿತ ಸಚಿವಾಲಯವು ಹಮ್ಮಿಕೊಂಡಿರುವ ಬೆಂಗಳೂರುಒನ್ ಯೋಜನೆಯನ್ನು ನಿರ್ವಹಿಸುವುದಕ್ಕಾಗಿ ಬೆಂಗಳೂರು-1 ನಿರ್ದೇಶನಾಲಯವನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 31 ವಿಮಾಅ 2003, ಬೆಂಗಳೂರು, ದಿನಾಂಕ 10ನೇ ನವೆಂಬರ್ 2004 ರ ಅನ್ವಯ ಸೃಜಿಸಲಾಗಿದೆ. ಬಹು ಮಹಡಿ ಕಟ್ಟಡದ ಕೊಠಡಿ ಸಂಖ್ಯೆ 110, 1ನೇ ಮಹಡಿ, ಗೇಟ್ ನಂ 2, ಇಲ್ಲಿ ಇಡಿಸಿಎಸ್ ನಿರ್ದೇಶನಾಲಯವು ಕಾರ್ಯ ನಿರ್ವಹಿಸುತ್ತಿದೆ. ಈ ನಿರ್ದೇಶನಾಲಯದ ಜವಾಬ್ದಾರಿಗಳು ಈ ಕೆಳಕಂಡಂತಿವೆ :

I. ಬೆಂಗಳೂರುಒನ್ ಕೇಂದ್ರಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ತಯಾರಿಸುವುದು.
II. ಹಿನ್ನಲೆ ಇಲಾಖೆಗಳ ಪ್ರಗತಿ ಅಂತರವನ್ನು ವಿಶ್ಲೇಷಿಸುವುದು.
III. ಸಂಬಂಧಪಟ್ಟ ಇಲಾಖೆಗಳೊಂದಿಗೆ ತಾಂತ್ರಿಕ ಇಂದೀಕರಣ (Upgradation) ಮತ್ತು ಸಮನ್ವಯ ಸಾಧಿಸುವುದು.
IV. ಬೆಂಗಳೂರುಒನ್ ಬ್ಯಾಂಕರ್ ರವರೊಂದಿಗೆ ಸಮನ್ವಯ ಸಾಧಿಸುವುದು.
V. ಬೆಂಗಳೂರುಒನ್ ಅರ್ಜಿಯನ್ನು ವಿನ್ಯಾಸಗೊಳಿಸುವುದು ಮತ್ತು ಮಾರಾಟಗಾರರೊಂದಿಗೆ ಸಮನ್ವಯ ಸಾಧಿಸುವುದು.
VI. ಪ್ರಪತ್ರ ಮತ್ತು ರಸೀದಿಗಳನ್ನು ವಿನ್ಯಾಸಗೊಳಿಸುವುದು.
VII. ಮಾರಾಟಗಾರರಿಗೆ ಹಣ ಪಾವತಿಸುವುದು.
VIII. ಸೇವಾ ಶುಲ್ಕವನ್ನು ಸಂಗ್ರಹಿಸುವುದು.
IX. ಹೊಸ ಸೇವೆಗಳನ್ನು ಗುರುತಿಸುವುದು.
X. 3ನೇ ಪಕ್ಷದಿಂದ ಲೆಕ್ಕತನಿಖೆ ಮಾಡಿಸುವುದು.
XI. ಲೇಖನ ಸಾಮಗ್ರಿಗಳ ನಿರ್ವಹಣೆ ಮತ್ತು
XII. ಬೆಂಗಳೂರು ಒನ್ ಯೋಜನೆಗೆ ಸಂಬಂಧಿಸಿದಂತೆ ಇ-ಆಡಳಿತ ಸಚಿವಾಲಯವು ವಹಿಸುವ ಇತರೆ ಜವಾಬ್ದಾರಿಗಳು.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 32 ಇಜಿಎಮ್ 2006 ದಿ:17.01.2007 ರ ಆದೇಶದಲ್ಲಿ ನಿರ್ದೇಶಕರು, ಬೆಂಗಳೂರುಒನ್ ಇವರನ್ನು ನಿದೇಶಕರು. ಇಡಿಸಿಎಸ್ ಎಂದು ಪುನರ್ ನಾಮಕರಣ ಮಾಡಲಾಗಿದೆ.

ಇಡಿಸಿಎಸ್ ನಿರ್ದೇಶನಾಲಯವು ಸಿಆಸುಇ, ಇ-ಆಡಳಿತ ಸಚಿವಾಲಯದ ಕ್ಷೇತ್ರ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇ-ಆಡಳಿತ ಸಚಿವಾಲಯದ ಮುಖ್ಯಸ್ಥರಾಗಿದ್ದು, ಇಡಿಸಿಎಸ್ ನಿರ್ದೇಶನಾಲಯದ ಮುಖ್ಯಸ್ಥರಾಗಿ ನಿರ್ದೇಶಕರು ದೈನಂದಿನ ಆಡಳಿತ ಮತ್ತು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**1.2 ಇಡಿಸಿಎಸ್ ನಿರ್ದೇಶನಾಲಯದ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಕಾರ್ಯಗಳ ಮತ್ತು ಕರ್ತವ್ಯಗಳ ವಿವರಗಳು:**

| ಕ್ರಮ ಸಂಖ್ಯೆ | ಅಧಿಕಾರಿಗಳು | ಕಾರ್ಯಗಳು ಮತ್ತು ಕರ್ತವ್ಯಗಳು |
|---|---|---|
| 1 | ನಿರ್ದೇಶಕರು | ಇಡಿಸಿಎಸ್ ನಿರ್ದೇಶನಾಲಯದ ಸಂಪೂರ್ಣ ಕಾರ್ಯ ಚಟುವಟಿಕೆಗಳ ನಿಯಮ ನೀತಿಗಳನ್ನು ರೂಪಿಸುವುದು, ಆರ್ಥಿಕ ಮಂಜೂರಾತಿ ಮತ್ತು ಯೋಜನೆಗಳ ಅನುಷ್ಠಾನ. |
| 2 | ಉಪ ನಿದೇಶಕರು / ಸಹಾಯಕ ನಿರ್ದೆಶಕರು | ಇಡಿಸಿಎಸ್ ನಿರ್ದೇಶನಾಲಯದ ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ನಿರ್ದೇಶಕರಿಗೆ ನೆರವಾಗುವುದು ಮತ್ತು ಸಿಬ್ಬಂದಿಗಳ ಮೇಲ್ವಿಚಾರಣೆ. |
| 3 | ಲೆಕ್ಕಾಧಿಕಾರಿ | ನಿರ್ದೇನಾಲಯದ ಲೆಕ್ಕ ಪತ್ರಗಳ ನಿರ್ವಹಣೆ. |
| 4 | ಇತರೆ ಸಿಬ್ಬಂದಿ ವರ್ಗ | ಯೋಜನೆಗಳ ಅನುಷ್ಠಾನದಲ್ಲಿ ಸಹಕರಿಸುವಿಕೆ. |

**1.3 ಕಲಂ 4(1) (ಬಿ) (iii) ರ ಪಾಲನೆಗೆ ಸಂಬಂಧಿಸಿದಂತೆ : -**

**ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ :-**

ಇಡಿಸಿಎಸ್ ನಿರ್ದೇಶನಾಲಯವು ಇ-ಆಡಳಿತ ಸಚಿವಾಲಯದ ಅಂಗ ಸಂಸ್ಥೆಯಾಗಿರುವುದರಿಂದ, ಕರ್ನಾಟಕ ಸರ್ಕಾರ (ಕಾರ್ಯ ನಿರ್ವಹಣೆ ನಿಯಮಗಳು, 1977, ಇದನ್ನು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005, ಇದರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ನಿಗಧಿ ಪಡಿಸಿದ ಕಾರ್ಯ ವಿಧಾನವನ್ನು ಅನುಸರಿಸಿ

ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಸಹಾಯಕರು / ಅಧಿಕಾರಿಗಳು, ಟಿಪ್ಪಣಿಗಳನ್ನು ದಾಖಲಿಸಿ ನಿರ್ದೇಶಕರಿಗೆ ಸಲ್ಲಿಸುತ್ತಾರೆ. ನಿರ್ದೇಶಕರು ಇಲಾಖಾ ಮುಖ್ಯಸ್ಥರಾಗಿ ತಮ್ಮ ಪ್ರತ್ಯಾಯೋಜನೆ ಪ್ರಕಾರ ಕಡತಗಳಿಗೆ ಮಂಜೂರಾತಿ ನೀಡುತ್ತಾರೆ ಮತ್ತು ಅವರಿಗೆ ಪ್ರತ್ಯಾಯೋಜನೆ ಪ್ರಕಾರ (Delegation of powers) ಮಂಜೂರಾತಿಗಾಗಿ ಆರ್ಥಿಕ ಅಧಿಕಾರವು ಇಲ್ಲದಿದ್ದಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅನುಮೋದನೆ ಪಡೆಯಲು ಕಡತವನ್ನು ಸಲ್ಲಿಸಲಾಗುವುದು. ಅಪರ ಮುಖ್ಯ ಕಾರ್ಯದರ್ಶಿಯವರ ಅನುಮೋದನೆಯ ನಂತರ, ಪ್ರಕರಣಗಳು ಇತ್ಯರ್ಥವಾಗುತ್ತವೆ.

1.4 **ಕಲಂ 4(1) (ಬಿ) (iv) ರ ಪಾಲನೆಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:-**

ಇಡಿಸಿಎಸ್ ನಿರ್ದೇಶನಾಲಯವು ಕರ್ನಾಟಕ ಸರ್ಕಾರದ ಸಚಿವಾಲಯದ ಅಧೀನ ಸಂಸ್ಥೆಯಾದ್ದರಿಂದ, ಕರ್ನಾಟಕ ಸರ್ಕಾರ (ಕಾರ್ಯನಿರ್ವಹಣೆ ನಿಯಮಗಳು, 1977, ಇದನ್ನು ಕರ್ನಾಟಕ ಸರ್ಕಾರ ಸಚಿವಾಲಯ ಕಚೇರಿ ಕಾರ್ಯವಿಧಾನದ ಕೈಪಿಡಿ (ಪರಿಷ್ಕೃತ) 2005, ಇದರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ಕಾರ್ಯಗಳ ನಿರ್ವಹಣೆಗಾಗಿ ಮಾನದಂಡ/ ಸೂತ್ರಗಳನ್ನು ನಿಗಧಿಪಡಿಸಲಾಗಿದ್ದು, ಅದನ್ನು ಅನುಸರಿಸಲಾಗುತ್ತಿದೆ.

**1.5 ಕಲಂ 4(1) (ಬಿ) (v) ಗೆ ಸಂಬಂಧಿಸಿದಂತೆ :-**

**ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು ಕೈಪಿಡಿಗಳು ಮತ್ತು ದಾಖಲೆಗಳು:-**

ಕರ್ನಾಟಕ ಸರ್ಕಾರದ ಕಾರ್ಯನಿರ್ವಹಣೆ ನಿಯಮಗಳು ಮತ್ತು ವಿವಿಧ ಯೋಜನೆಗಳಲ್ಲಿನ ನಿರ್ದೇಶಿಕೆಗಳು.

**1.6 ಕಲಂ 4(1) (ಬಿ) (vi) ಗೆ ಸಂಬಂಧಿಸಿದಂತೆ:-**

**ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿ:-**

ಕಚೇರಿ ಕಡತಗಳು ಮತ್ತು ಯೋಜನಾ ಕಡತಗಳು

**1.7 ಕಲಂ 4(1) (ಬಿ) (vii) ಗೆ ಸಂಬಂಧಿಸಿದಂತೆ:-**

**ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು:-**

ಇಡಿಸಿಎಸ್ ನಿರ್ದೇಶನಾಲಯವು ಸರ್ಕಾರವು ಅನುಮೋದಿಸಿದ ಇ-ಯೋಜನೆಗಳನ್ನು ಅನುಷ್ಠಾನ ಗೊಳಿಸುವ ಸಂಸ್ಥೆಯಾಗಿರುತ್ತದೆ. ಇದರಿಂದಾಗಿ ಸರ್ಕಾರದ ಮಟ್ಟದಲ್ಲಿ ಚರ್ಚೆಯಾದ, ಗುರುತಿಸಲ್ಪಟ್ಟ ವಿಷಯಗಳ ಬಗ್ಗೆ ಯೋಜನೆಗಳನ್ನು ತಯಾರಿಸಿ ಅವುಗಳ ಅನುಮೋದನೆಯ ನಂತರ ಅನುಷ್ಠಾನ ಗೊಳಿಸಲಾಗುತ್ತಿದೆ.

ಇಡಿಸಿಸ್ ನಿರ್ದೇಶನಾಲಯದ ಯೋಜನೆಗಳಿಗೆ ಸಂಬಂಧಿಸಿದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಾರ್ವಜನಿಕರು ಇಚ್ಛೆಸಿದ್ದಲ್ಲಿ, ಲಿಖಿತ ಮೂಲಕ ಅಥವಾ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ ಸಲಹೆಗಳನ್ನು ನೀಡಲು ಆಸ್ಪದವಿರುತ್ತದೆ.

1.8 ಕಲಂ **4(1) (ಬಿ) (viii)** ಗೆ ಸಂಬಂಧಿಸಿದಂತೆ:-

**ಮಂಡಳಿಗಳು, ಪರಿಷತ್ತುಗಳು ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅವರ ಸಲಹೆಯ ಉದ್ಧೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೆ ಎಂಬದರ ವಿವರ ಪಟ್ಟಿ:-**

ಅ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ನಡೆಯುವ ಅಧಿಕಾರಯುಕ್ತ ಸಭೆ. (**Empowered Committee**)

ಸದರಿ ಸಮಿತಿಯ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುವುದಿಲ್ಲ. ನಡವಳಿಗಳನ್ನು ಸಾರ್ವಜನಿಕರು ಪಡೆಯಬಹುದು.

**1.9** ಕಲಂ **4(1) (ಬಿ) (ix)** ಗೆ ಸಂಬಂಧಿಸಿದಂತೆ:- ಇಡಿಸಿಸ್ ನಿರ್ದೇಶನಾಲಯದ ಅಧಿಕಾರಿ / ಸಿಬ್ಬಂದಿಗಳ ನಿರ್ದೇಶಿಕೆ(**Directory**):-

ಇಡಿಸಿಸ್ ನಿರ್ದೇಶನಾಲಯದ ಖಾಯಂ ಅಧಿಕಾರಿ / ಸಿಬ್ಬಂದಿಗಳ ನಿರ್ದೇಶಿಕೆ(**Directory**) ನೀಡಿದೆ.

**1.10** ಕಲಂ **4(1) (ಬಿ) (x)** ಗೆ ಸಂಬಂಧಿಸಿದಂತೆ:-

**ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಸಂಬಳ:-**

ಇಡಿಸಿಸ್ ನಿರ್ದೇಶನಾಲಯ ಸೇವೆಗೆ ನಿಯೋಜನೆಗೊಳ್ಳುವ ರಾಜ್ಯ / ಕೇಂದ್ರ ಸರ್ಕಾರದ ಖಾಯಂ ಅಧಿಕಾರಿ / ಸಿಬ್ಬಂದಿಗಳಿಗೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಮಾಸಿಕ ವೇತನವನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿ ಮತ್ತು ಕರ್ನಾಟಕ ಸಿವಿಲ್ ಸೇವಾ (ಪರಿಷ್ಕೃತ ವೇತನ) ನಿಯಮಗಳು 2012 ಮತ್ತು ಅಖಿಲ ಭಾರತ ಸೇವಾ ನಿಯಮಗಳ ಪ್ರಕಾರ ನೀಡಲಾಗುತ್ತಿದೆ.

**1.11** ಕಲಂ **4(1) (ಬಿ) (xi)** ಗೆ ಸಂಬಂಧಿಸಿದಂತೆ:-

**ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಪಿತ ವೆಚ್ಚಗಳನ್ನು ಮತ್ತು ಬಟವಾಡೆಗಳ ವರದಿಯನ್ನು ಸೂಚಿಸಿ ಅದನ್ನು ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ : -**

ಇಡಿಸಿಸ್ ನಿರ್ದೇಶನಾಲಯದ ಯೋಜನೆಗಳಿಗೆ 2017-18 ರ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವಿರಗಳನ್ನು ನೀಡಿದೆ. (Budget 2017-18)

1.12 ಕಲಂ 4)1) (ಬಿ) (xii) ಗೆ ಸಂಬಂಧಿಸಿದಂತೆ:- **ಹಂಚಿಕೆ ಮಾಡಲಾದ ಮೊಬಲಗಳನ್ನೊಳಗೊಂಡು ಸಹಾಯ ಧನ (subsidy programmes) ಕಾರ್ಯಕ್ರಮಗಳ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವಿರಗಳು:**

ಸಹಾಯಧನ ಕಾರ್ಯಕ್ರಮಗಳು (subsidy programmes) ಇರುವುದಿಲ್ಲ.

**1.13 ಕಲಂ 4(1) (ಬಿ) (xiii) ಗೆ ಸಂಬಂಧಿಸಿದಂತೆ:-**

**ನೀಡಿರುವ ರಿಯಾಯಿತಿಗಳು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವುದರ ವಿವರಗಳು:-**

ಇಡಿಸಿಸ್ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ, ಯಾವುದೇ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು (Concessions, permits or authorizations) ನೀಡಿರುವುದಿಲ್ಲ.

**1.14 ಕಲಂ 4(1) (ಬಿ) (xiv) ಗೆ ಸಂಬಂಧಿಸಿದಂತೆ:-**

**ಲಭ್ಯವಿರುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳು:-**

ಇ-ಆಡಳಿತ ಇಲಾಖೆಯ ಇಡಿಸಿಎಸ್ ನಿರ್ದೇಶನಾಲಯಕ್ಕೆ ಸಂಬಂಧಿಸಿದ www.karnataka.gov.in/edcs - ಈ ವೆಬ್‌ಸೈಟ್ ನಲ್ಲಿ ಈ ಕಳಕಂಡ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.

1. ಇಡಿಸಿಸ್ ನಿರ್ದೇಶನಾಲಯವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು.
2. ಮಾಹಿತಿ ಹಕ್ಕು

**1.15 ಕಲಂ 4(1) (ಬಿ) (xv) ಗೆ ಸಂಬಂಧಿಸಿದಂತೆ:-**

**ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕರ್ತವ್ಯ ವೇಳಾ ಮಾಹಿತಿ ಪಡೆಯಲು ಸಾರ್ವಜನಿಕರಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:-**

ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿಲ್ಲ.

ಆದರೆ ಇ-ಆಡಳಿತ ಇಲಾಖೆಯ (http://www.karnataka.gov.in/edcs) ಮತ್ತು ಮಾನ್ಯ ಮುಖ್ಯಮಂತ್ರಿಗಳ ಕಛೇರಿಯ (http://pratibimba.karnataka.gov.in) ನಲ್ಲಿ ವೆಬ್‌ಸೈಟ್ ನಲ್ಲಿ ಯೋಜನೆಗಳ ಮಾಹಿತಿ ಲಭ್ಯವಿರುತ್ತದೆ.

**1.16 ಕಲಂ 4(1) (ಬಿ) (xvi) ಗೆ ಸಂಬಂಧಿಸಿದಂತೆ:-**

**ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳು:-**

| ಕ್ರಮ ಸಂಖ್ಯೆ | ಅಧಿಕಾರಿಯ ಪದನಾಮ | ಯಾವ ವಿಷಯಗಳಗಾಗಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯೆಂದು ಪದನಾಮ ಕರಿಸಲಾಗಿದೆಯೋ, ಆ ವಿಷಯಗಳ ವಿವರಗಳು |
|---|---|---|
| (1) | (2) | (3) |
| 1. | ಶ್ರೀಮತಿ.ಹೆಚ್.ಎಸ್.ಕುಮುದವಲ್ಲಿ<br>- ಸಾರ್ವಜನಿಕ ಮಾಹಿತಿ ಅಧಿಕಾರಿ. | ಇಡಿಸಿಸ್ ನಿರ್ದೇಶನಾಲಯದ ಮಾಹಿತಿ ಹಕ್ಕು ಅಧಿನಿಯಮದ ವಿಷಯಕ್ಕಾಗಿ |
| 2. | ಡಾ|| ಸುನಿಲ್ ಪಂವಾರ್,<br>ನಿರ್ದೇಶಕರು- ಮೇಲ್ಮನವಿ ಪ್ರಾಧಿಕಾರ | ಇಡಿಸಿಸ್ ನಿರ್ದೇಶನಾಲಯದ ಮಾಹಿತಿ ಹಕ್ಕು ಅಧಿನಿಯಮದ ವಿಷಯಕ್ಕಾಗಿ |

**1.17 ಕಲಂ 4(1) (ಬಿ) (xvii) ಗೆ ಸಂಬಂಧಿಸಿದಂತೆ:-**

**ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು:-**

ಸೂಚನೆಯನ್ನು ಪಾಲಿಸಲಾಗುವುದು.

*****